## ಮೈಸೂರು ಮಹಾನಗರ ಪಾಲಿಕೆ-ತೋಟಗಾರಿಕೆ ವಿಭಾಗ

ನಂ.ಮೈನಪಾ/ತೋ.ವಿ/ಸ.ಕಾ.ಅ/237/2025-26 ದಿನಾಂಕ:05-11-2025

### ಅನುಮತಿ ಪತ್ರ

**ವಿಷಯ:** ವಾರ್ಡ್ ನಂ.1 ರ ಲಕ್ಷ್ಮಿಕಾಂತ ನಗರದ ವೃತ್ತದ ಪಕ್ಕದ ಉದ್ಯಾನವನ ಹಾಗೂ ಲಕ್ಷ್ಮಿಕಾಂತ ನಗರ ವರ್ತುಲ ರಸ್ತೆ ಹತ್ತಿರದ 02 ಉದ್ಯಾನವನವನ್ನು " **ನಮ್ಮ ಮೈಸೂರು - ನಮ್ಮ ಕೊಡುಗೆ** " ದತ್ತು ಯೋಜನೆಯಡಿ ಉಚಿತವಾಗಿ ನಿರ್ವಹಣೆ ಮಾಡಲು ವಹಿಸಿಕೊಡುವ ಬಗ್ಗೆ.

**ಉಲ್ಲೇಖ:** ತಮ್ಮ ಮನವಿ ಪತ್ರದ ದಿನಾಂಕ: 24-10-2025

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ವಾರ್ಡ್ ನಂ.1 ರ ಲಕ್ಷ್ಮಿಕಾಂತ ನಗರದ ವೃತ್ತದ ಪಕ್ಕದ ಉದ್ಯಾನವನ ಹಾಗೂ ಲಕ್ಷ್ಮಿಕಾಂತ ನಗರ ವರ್ತುಲ ರಸ್ತೆ ಹತ್ತಿರದ 02 ಉದ್ಯಾನವನವನ್ನು " **ನಮ್ಮ ಮೈಸೂರು - ನಮ್ಮ ಕೊಡುಗೆ** " ದತ್ತು ಯೋಜನೆಯಡಿ ಉಚಿತವಾಗಿ ನಿರ್ವಹಣೆ ಮಾಡಲು ವಹಿಸಿಕೊಡುವಂತೆ ಪ್ರಾಂಶುಪಾಲರು, ಶೇಷಾದ್ರಿಪುರಂ ಪದವಿ ಕಾಲೇಜು, ಮೈಸೂರು ರವರು ಉಲ್ಲೇಖಿತ ಪತ್ರದಲ್ಲಿ ಕೋರಿರುತ್ತಾರೆ.

ಅದರಂತೆ ಪ್ರಾಂಶುಪಾಲರು, ಶೇಷಾದ್ರಿಪುರಂ ಪದವಿ ಕಾಲೇಜು, ನಂ.25, 26 ಹೊರ ವರ್ತುಲ ರಸ್ತೆ, ಭಾರತ ಕ್ಯಾನ್ಸರ್ ಆಸ್ಪತ್ರೆ ಹತ್ತಿರ, ಹೆಬ್ಬಾಳ್, ಮೈಸೂರು ರವರು 03 ವರ್ಷಗಳ ಅವಧಿಗೆ ನಿರ್ವಹಣೆ ಮಾಡಲು ಮಹಾನಗರ ಪಾಲಿಕೆಯು ಕೆಳಗೆ ತಿಳಿಸಿರುವ ಷರತ್ತುಗಳಿಗೆ ಒಳಪಟ್ಟು ಒಪ್ಪಲಾಗಿರುತ್ತದೆ.

ಷರತ್ತುಗಳು :

1 ಉದ್ಯಾನವನವನ್ನು ದಿನಾಂಕ: 05-11-2025 ರಿಂದ 04-11-2028 ವರೆಗೆ 03 ವರ್ಷಗಳ ಅವಧಿಗೆ ನಿರ್ವಹಣೆಗಾಗಿ ನೀಡಿದ್ದು, ಅವಧಿ ಮುಗಿದ ನಂತರ ಸುಸ್ಥಿತಿಯಲ್ಲಿ ನಗರ ಪಾಲಿಕೆಗೆ ಹಸ್ತಾಂತರಿಸುವುದು.

2 ಉದ್ಯಾನವನದ ಮಾಲೀಕತ್ವವು ಮಹಾನಗರ ಪಾಲಿಕೆಯದ್ದಾಗಿರುತ್ತದೆ ಹಾಗೂ ಯಾವುದೇಕಾರಣಕ್ಕೂ ಪರಭಾರೆ ಮಾಡಬಾರದು.

3 ಉದ್ಯಾನವನದಲ್ಲಿ ನಗರ ಪಾಲಿಕೆಯ ಹಾಗೂ ಸರ್ಕಾರದ ಜಾಹಿರಾತುಗಳನ್ನು ಅಳವಡಿಸಬೇಕಾದಲ್ಲಿ ಯಾವುದೇ ನಿರ್ಬಂಧಗಳಿಲ್ಲದಂತೆ ಅವಕಾಶವನ್ನು ಕಲ್ಪಿಸತಕ್ಕದ್ದು.

4 ಉದ್ಯಾನವನದಲ್ಲಿ ಯಾವುದೇ ರೀತಿಯ ಖಾಯಂಕಟ್ಟಡ / ಪರಿವರ್ತನೆ ಮಾಡಬಾರದು.

5 ಉದ್ಯಾನವನಕ್ಕೆ ಯಾವುದೇ ರೀತಿಯ ಹೆಸರನ್ನು ಇಡಬಾರದು ಮತ್ತು ಇರುವ ಹೆಸರನ್ನು ಯಾವ ಕಾರಣಕ್ಕೂ ನಗರ ಪಾಲಿಕೆ ಅನುಮತಿ ಇಲ್ಲದೇ ಬದಲಾಯಿಸಬಾರದು.

6 ಉದ್ಯಾನವನದಲ್ಲಿ ಯಾವುದೇ ಕಾನೂನು ಬಾಹಿರ ಚಟುವಟಿಕೆಗಳಿಗೆ ಆಸ್ಪದ ನೀಡಬಾರದು ಹಾಗೂ ಯಾವುದೇ ಅಮಲು ಪದಾರ್ಥಗಳು ಹಾಗೂ ತಂಬಾಕಿನ ಜಾಹೀರಾತು ಹಾಕಬಾರದು.

. . . 2

7 ಸದರಿ ಖಾಸಗೀ ಸಂಸ್ಥೆ / ವ್ಯಕ್ತಿಯವರು ನಗರ ಪಾಲಿಕೆಯ ಉದ್ಯಾನವನವನ್ನು ನಿರ್ವಹಿಸುತ್ತಿರುವ ಬಗ್ಗೆ ಗರಿಷ್ಟ ಎರಡು ನಾಮಫಲಕಗಳನ್ನು ಮೈಸೂರು ಮಹಾನಗರ ಪಾಲಿಕೆಯ ಪದನಾಮದೊಂದಿಗೆ ಹಾಕಬಹುದು. ಇದರ ಅಳತೆ 2 X 4 ಮೀರಬಾರದು ಹಾಗೂ ಬರವಣಿಗೆಯಲ್ಲಿ ಬಳಸುವ ಭಾಷೆಯಲ್ಲಿ ಕನ್ನಡ ಭಾಷೆಗೆ ಅಗ್ರಸ್ಥಾನದ ಮತ್ತು ಪ್ರಥಮ ಆದ್ಯತೆ ನೀಡತಕ್ಕದ್ದು.

8 ಉದ್ಯಾನವನದ ಯಾವುದೇ ಭಾಗದಲ್ಲಿ ಸಣ್ಣ ವ್ಯಾಪಾರಿಗಳಿಗೆ ವೃತ್ತಿ ನಡೆಸಲು ಬಾಡಿಗೆಗಾಗಲೀ ಅಥವಾ ಗುತ್ತಿಗೆಗಾಗಲೀ ಕೊಡುವುದನ್ನು ಪೂರ್ಣವಾಗಿ ನಿಷೇಧಿಸಿದೆ.

9. ಉದ್ಯಾನವನವನ್ನು ನಿರ್ವಹಣೆ ಮಾಡುವ ಕಾರ್ಯಕ್ಕೆ ಬೇಕಾಗುವ ಸಿಬ್ಬಂದಿ, ಕಾವಲು ಸಿಬ್ಬಂದಿ, ನೀರು, ವಿದ್ಯುತ್, ಗೊಬ್ಬರ, ಗಿಡಗಳು ಇನ್ನಿತರ ಯಾವುದೇ ಬಾಬ್ತುಗಳಿಗೆ ಭರಿಸಬಹುದಾದ ಖರ್ಚನ್ನು ತಮ್ಮ ಸಂಸ್ಥೆ ವತಿಯಿಂದಲೇ ಭರಿಸಬೇಕು ಹಾಗೂ ನಗರಪಾಲಿಕೆ ವತಿಯಿಂದ ಯಾವುದೇ ಹಣಕಾಸಿನ ಸಹಾಯ ನೀಡಲಾಗುವುದಿಲ್ಲ.

10 ಉದ್ಯಾನವನದ ಸುತ್ತಾ ಇರುವ ಕಾಂಪೌಂಡ್, ಗ್ರಿಲ್‌ಗಳು, ಬೆಂಚುಗಳು, ಕೊಳಾಯಿಗಳು, ನೀರಿನ ತೊಟ್ಟಿಗಳು, ದೀಪದ ವ್ಯವಸ್ಥೆ ಮುಂತಾದವುಗಳನ್ನು ಸುಸ್ಥಿತಿಯಲ್ಲಿ ಕಾಪಾಡುವುದು.

11 ಈಗಾಗಲೇ ಅಭಿವೃದ್ಧಿಪಡಿಸಿರುವ ಉದ್ಯಾನವನ್ನು ಯಾವುದೇ ಕಾರಣಕ್ಕೂ ಹಾಳಾಗದಂತೆ ಸುಸ್ಥಿತಿಯಲ್ಲಿ ನಿರ್ವಹಣೆ ಮಾಡಬೇಕು.

12 ಉದ್ಯಾನವನವನ್ನು ಇನ್ನೂ ಹೆಚ್ಚಿನ ಮಟ್ಟದಲ್ಲಿ ಅಭಿವೃದ್ಧಿ ಪಡಿಸಬೇಕಾದಲ್ಲಿ, ನಗರಪಾಲಿಕೆಯ ಪೂರ್ವಾನುಮತಿ ಪಡೆದು ಅಭಿವೃದ್ಧಿಪಡಿಸಬೇಕು.

13 ನಾಗರೀಕರು / ಸಾರ್ವಜನಿಕರಿಂದ ಉದ್ಯಾನವನದ ನಿರ್ವಹಣೆ ಬಗ್ಗೆ ಯಾವುದೇ ದೂರು ಆಕ್ಷೇಪಣೆಗಳು ಬಂದಲ್ಲಿ ಯಾವುದೇ ಮುನ್ಸೂಚನೆ ನೀಡದೆ ನೀಡಿರುವ ಅನುಮತಿ ಆದೇಶವನ್ನು ರದ್ದು ಪಡಿಸುವ ಅಧಿಕಾರ ನಗರ ಪಾಲಿಕೆಗೆ ಇರುತ್ತದೆ.

ಆಯುಕ್ತರು
ಮೈಸೂರು ಮಹಾನಗರ ಪಾಲಿಕೆ,
ಮೈಸೂರು.

ರವರಿಗೆ,
ಪ್ರಾಂಶುಪಾಲರು,
ಶೇಷಾದ್ರಿಪುರಂ ಪದವಿ ಕಾಲೇಜು,
ನಂ.25, 26 ಹೊರ ವರ್ತುಲ ರಸ್ತೆ,
ಭಾರತ ಕ್ಯಾನ್ಸರ್ ಆಸ್ಪತ್ರೆ ಹತ್ತಿರ, ಹೆಬ್ಬಾಳ್,
ಮೈಸೂರು.